MKANHC-1.2

Sl.No. :

Total No. of Pages : 2

ಪ್ರಥಮ ಚತುರ್ಮಾಸ ಎಂ.ಎ. ಪದವಿ ಪರೀಕ್ಷೆ, ಮೇ/ಜೂನ್ - 2023
(CBCS, SLM Scheme)
ಕನ್ನಡ
ಕೋರ್ಸ್–II : ಆಧುನಿಕ ಕನ್ನಡ ಸಾಹಿತ್ಯದ ಹಿನ್ನೆಲೆ

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ವಿಭಾಗಗಳಿಗೂ ಉತ್ತರಿಸಿ.*

ವಿಭಾಗ–ಎ

ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ: **[4×5=20]**

ಪ್ರ1) ಹೊಸಗನ್ನಡ ಅರುಣೋದಯ ಕಾಲದ ವಿಭಾಗಗಳು

ಪ್ರ2) ಚಾಮರಾಜೇಂದ್ರ ಒಡೆಯರ್

ಪ್ರ3) ಅರುಣೋದಯ ಕಾಲದ ಪ್ರಮುಖ ಕವಿಗಳು

ಪ್ರ4) ಬಾಳಾಚಾರ್ಯ ಸಕ್ಕರಿ

ಪ್ರ5) ನಿರಂಜನ

ಪ್ರ6) ಅಂಬೇಡ್ಕರ್‌ವಾದ

ವಿಭಾಗ–ಬಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ: **[3×10=30]**

ಪ್ರ7) ಕರ್ನಾಟಕ ಏಕೀಕರಣ ಚಳುವಳಿಯ ಹುಟ್ಟು ಮತ್ತು ಬೆಳವಣಿಗೆಯನ್ನು ವಿವರಿಸಿ.

ಪ್ರ8) ಪಿ. ಲಂಕೇಶ್, ಯೂ.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್–ಇಬ್ಬರು ಸಾಹಿತಿಗಳ ಕೊಡುಗೆಯನ್ನು ಕುರಿತು ಬರೆಯಿರಿ.

ಪ್ರ9) ಪ್ರಗತಿಶೀಲ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಯನ್ನು ವಿಶದಪಡಿಸಿ.

ಪ್ರ10)ಆಧುನಿಕ ಕನ್ನಡ ಸಾಹಿತ್ಯದ ತಾತ್ವಿಕ ಸಿದ್ಧಾಂತಗಳಾವುವು? ಯಾವುದಾದರೂ ಒಂದರ ಸಿದ್ಧಾಂತವನ್ನು ಹಿನ್ನೆಲೆಯೊಂದಿಗೆ ವಿವರಿಸಿ.

ಪ್ರ11)ಸ್ತ್ರೀವಾದಿ ಸಾಹಿತ್ಯದ ನೆಲೆ–ಬೆಲೆಗಳನ್ನು ಚರ್ಚಿಸಿ.

ವಿಭಾಗ–ಸಿ

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ: **[2×15=30]**

ಪ್ರ12)ನವೋದಯ ಸಾಹಿತ್ಯವನ್ನು ರೂಪಿಸಿದ ದೇಶೀಯ ಮತ್ತು ವಿದೇಶಿಯ ಪ್ರೇರಣೆಗಳಾವುವು? ವಿವರಿಸಿ.

ಪ್ರ13)ಕರ್ನಾಟಕದಲ್ಲಿ ನಡೆದ ವಿವಿಧ ಕನ್ನಡ ಭಾಷಾ ಚಳುವಳಿಗಳು ಆಧುನಿಕ ಕನ್ನಡ ಸಾಹಿತ್ಯವನ್ನು ಹೇಗೆ ರೂಪಿಸಿವೆ ವಿವರಿಸಿ.

ಪ್ರ14)"ಕನ್ನಡದ ಬೇರಿಗೆ ಸಂಸ್ಕೃತದ ನೀರು ಬಿದ್ದು ಒಂದು ವಿಶಿಷ್ಟವಾದ ಸಂಸ್ಕೃತಿಯ ಮರವು ಮೊಳೆತು ಬೆಳೆಯಿತು" – ಈ ಹೇಳಿಕೆಯನ್ನು ಚರ್ಚಿಸಿ.

ಪ್ರ15)ದಲಿತ–ಬಂಡಾಯ ಸಾಹಿತ್ಯದ ದೃಷ್ಟಿ ಧೋರಣೆಗಳನ್ನು ವಿವರಿಸಿ.

